ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,

ದೇವದುರ್ಗ.

**CC No.461/2024**

**CW-4 PW-3**

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಶಂಕರ ಇಂಗಳೇ |
| ತಂದೆ | ಃ | ಬಸವರಾಜ |
| ವಯಸ್ಸು | ಃ | 30 |
| ಉದ್ಯೋಗ | ಃ | ಪಿ.ಸಿ |
| ವಾಸಸ್ಥಳ | ಃ | ಗಬ್ಬೂರು |
| ಪ್ರಮಾಣಿಕರಿಸಿದ ದಿನಾಂಕ | ಃ | **22-08-2025** |

ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ.

ನಾನು ದಿನಾಂಕ 31.10.2021 ರಿಂದ ಇಲ್ಲಿವರೆಗೆ ಗಬ್ಬೂರು ಠಾಣೆಯಲ್ಲಿ ಪಿ.ಸಿ ಎಂದು ಕೆಲಸ ಮಾಡುತ್ತಿದೇನೆ.

ದಿನಾಂಕ **20-04-2024** ರಂದು ಸಂಜೆ **06.15** ಗಂಟೆಗೆ ನಾನು, ರಮೇಶ ಶಬ್ಬೀರ್, ಶಿವರಾಜ, ನೀಲಕಂಠ ಮತ್ತು ಕೋನಮ್ಮ ಠಾಣೆಯಲ್ಲಿ ಇದ್ದಾಗ ಪಿ.ಎಸ್.ಐ ಇವರು ಕರೆದು ನಿಲೋಗಲ್ ಗ್ರಾಮದ ಸಾರ್ವಜನಿಕ ಸ್ಥಳದಲ್ಲಿ ಅಕ್ರಮವಾಗಿ ಮಧ್ಯ ಮಾರಾಟದ ಬಾತ್ಮಿ ಬಂದಿರುವುದನ್ನು ತಿಳಿಸಿದ್ದು ತಕ್ಷಣ ಪಂಚರಾದ ಚಾಸಾ**-2** ಮತ್ತು **3** ನ್ನು ಬರ ಮಾಡಿಕೊಂಡು ಸಂಜೆ **06.30** ಗಂಟೆಗೆ ಠಾಣೆಯಿಂದ ಸರಕಾರಿ ಜೀಪಿನಲ್ಲಿ ನಿಲೋಗಲ್ ಗ್ರಾಮಕ್ಕೆ ಹೋಗಿ ಅಂಬೇಡ್ಕರ ಭವನದ ಹತ್ತಿರ ಜೀಪನ್ನು ನಿಲ್ಲಿಸಿ ಸ್ವಲ್ಪ ದೂರ ನಡೆದುಕೊಂಡು ಹೋಗಿ ಮರೆಯಲ್ಲಿ ನಿಂತು ನೋಡಿದಾಗ ಒಬ್ಬ ಮಹಿಳೆ ತನ್ನ ಮನೆ ಮುಂದೆ ಸಾರ್ವಜನಿಕ ಸ್ಥಳದಲ್ಲಿ ಅಕ್ರಮ ಮಧ್ಯ ಮಾರಾಟ ಮಾಡುತ್ತಿದ್ದು ಸುತ್ತಲೂ ಜನರು ನಿಂತು ಹಣ ನೀಡಿ ಮಧ್ಯದ ಪೌಚುಗಳನ್ನು ಖರೀದಿಸುತ್ತಿದ್ದರು. ತಕ್ಷಣ ದಾಳಿ ಮಾಡಿದಾಗ ಮಾರಾಟ ಮಾಡುತ್ತಿದ್ದವರು ಸಿಕ್ಕಿದ್ದು ಅವರನ್ನು ವಿಚಾರಿಸಿದಾಗ ಹೆಸರು ಚನ್ನಮ್ಮ ಗಂಡ ಮಾಯಪ್ಪ ಎಂದು ತಿಳಿಸಿರುತ್ತಾರೆ. ಸ್ಥಳದಲ್ಲಿ ಪಂಚರ ಸಮಕ್ಷಮ ಚೀಲವನ್ನು ಪರಿಶೀಲಿಸಿದಾಗ ಅದರಲ್ಲಿ

1. **90** ಎಂ.ಎಲ ಓ.ಸಿ ವಿಸ್ಕಿ **1248** ಪೌಚುಗಳು
2. **180** ಎಂ.ಎಲ ಬಿ.ಪಿ ವಿಸ್ಕಿ **48** ಪೌಚುಗಳು
3. **650** ಎಂ.ಎಲ ಕೆ.ಎಫ್ ಸ್ಟ್ರಾಂಗ್ ಬಿಯರ್ **51** ಬಾಟಲಿಗಳು

4. **330** ಎಂ.ಎಲ ಕೆ.ಎಫ್ ಟಿನ್ ಬಿಯರ್ **94** ಬಾಟಲಿಗಳು ಇದ್ದು

ಅವುಗಳನ್ನು ಜಪ್ತಿ ಮಾಡಿಕೊಂಡು ಅವುಗಳನ್ನು ರಾಸಾಯನಿಕ ಪರೀಕ್ಷೆಗೆ ಕಳುಹಿಸಲು **22** ಬಾಕ್ಸಗಳಲ್ಲಿ ತೆಗೆದು ಸೀಲ್ ಮಾಡಿಲಾಗಿರುತ್ತದೆ. ಸದರಿ ಪಂಚನಾಮೆಯನ್ನು ಸಂಜೆ **7** ರಿಂದ **8** ಗಂಟೆ ವರೆಗೆ ಮಾಡಲಾಗಿರುತ್ತದೆ. ನಂತರ ಪಿ.ಎಸ್.ಐ ಇವರು ಠಾಣೆಗೆ ಬಂದು ಜಪ್ತಿ ಮಾಡಿದ ಮುಮಾ, ದೂರು ಮತ್ತು ಪಂಚನಾಮೆ ಜೊತೆ ಚಾಸಾ**-12** ರವರಿಗೆ ಪ್ರಕರಣ ದಾಖಲು ಮಾಡಲು ಹೇಳಿರುತ್ತಾರೆ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ **RRH** ವಕೀಲರಿಂದ.</u>

ನಾನು ಗಬ್ಬೂರು ಠಾಣೆಯಲ್ಲಿ ದಿನಾಂಕ 31.10.2021 ರಿಂದ ಕೆಲಸ ಮಾಡುತ್ತಿದ್ದೇನೆ. ದಿನಾಂಕ 20.04.2024 ರಂದು ದಾಳಿ ಮಾಡಿರುತ್ತೇವೆ. ಗಬ್ಬೂರಿನಿಂದ ನಿಲೋಗಲ್ ಗ್ರಾಮ ತಲುಪಲು ಅಂದಾಜು 25 ನಿಮೀಷ ಬೇಕಾಗುತ್ತದೆ. ಮಧ್ಯ ಖರೀದಿ ಮಾಡಲು ಅಂದಾಜು 10-15 ಜನರು ಇದ್ದರು. ಘಟನ ಸ್ಥಳ ಪೂರ್ವಕ್ಕೆ ಶಿವಮ್ಮ ಮನೆ, ಪಶ್ಚಿಮಕ್ಕೆ ಆರೋಪಿ ಮನೆ, ಉತ್ತರಕ್ಕೆ ಶಿವಮ್ಮ ಹೊಟೇಲ್ ಮತ್ತು ದಕ್ಷಿಣಕ್ಕೆ ಸಿಸಿ ರಸ್ತೆ ಇರುತ್ತದೆ. ಪಂಚರು ನಿಲೋಗಲ್ ಗ್ರಾಮದವರು ಆಗಿರುತ್ತಾರೆ. ಜಪ್ತಿ ಮಾಡಿಕೊಂಡ ಪೌಚುಗಳು ಮತ್ತು ಬಾಟಲಿಗಳು ಪರವಾನಿಗೆ ಪಡೆದ ಮಧ್ಯದದ ಅಂಗಡಿಗಳಲ್ಲಿ ಸಿಗುತ್ತವೆ ಎಂದರೆ ಸರಿ. ಜಪ್ತಿ ಮಾಡಿಕೊಂಡ ಮಧ್ಯದ ತಯಾರಿಕ ದಿನಾಂಕ ಹೇಳಲು ಬರುವುದಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಸಂಗತಿಗಳು ಸುಳ್ಳು ಇವೆ ಎಂದರೆ ಸರಿಯಲ್ಲ. ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.